ಇ) ಹೌದು

ಈ) ನಿಜ.

ಉ) ಸದ್ಯದಲ್ಲಿ ಇಂತಹ ಪ್ರಸ್ತಾವನೆ ಇರುವುದಿಲ್ಲ.

ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳು

4615 (5180) : ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಲು ಎಷ್ಟು ಲೈಸೆನ್ಸ್ ನೀಡಲಾಗಿದೆ ಅವು ಯಾವುವು? (ವಿವರ ನೀಡುವುದು)

ಆ) ಇವುಗಳಲ್ಲಿ ಖಾಸಗಿ ಹಾಗೂ ಸಹಕಾರಿ ರಂಗದ ಕಾರ್ಖಾನೆಗಳು ಎಷ್ಟು?

ಇ) ಲೈಸೆನ್ಸ್ ಪಡೆದ ಎಷ್ಟು ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾಗಿವೆ?

ಈ) ಸಹಕಾರಿ ರಂಗದ ಮೇಲೆ ಲೈಸೆನ್ಸ್ ಪಡೆದ ಎಷ್ಟು ಸಕ್ಕರೆಕಾರ್ಖಾನೆಗಳು ಪ್ರಾರಂಭವಾಗಿವೆ. ಹಾಗೂ ಅವು ಈಗ ಯಾವ ಹಂತದಲ್ಲಿವೆ? (ವಿವರ ನೀಡುವುದು)

ಉ) ಸಹಕಾರಿ ರಂಗದ ಮೇಲೆ ಲೈಸೆನ್ಸ್ ಪಡೆದ ಎಷ್ಟು ಸಕ್ಕರೆ ಕಾರ್ಖಾನೆಗಳು ಅರ್ಧಕ್ಕೆ ನಿಂತಿವೆ ಅವುಗಳನ್ನು ಪೂರ್ಣಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ?

ಶ್ರೀ ಎಂ. ಮಹಾನೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) 1998ರಲ್ಲಿ ಸಕ್ಕರೆ ಉದ್ದಿಮೆಯು ಪರವಾನಿಗೆ ಪಡೆಯುವುದರಿಂದ ಮುಕ್ತವಾದ ನಂತರ ಕೇಂದ್ರ ಸರ್ಕಾರವು ಲೈಸೆನ್ಸ್ ಬದಲಾಗಿ ಐಇಎಂ ನೊಂದಾಣಿ ಪದ್ಧತಿಯನ್ನು ಜಾರಿಗೆ ತಂದಿದೆ. ಹೀಗೆ ಹೊಸದಾಗಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ಐ ಇ ಎಂ ನೀಡುತ್ತದೆ. ಸದರಿ ಐ ಇ ಎಮ್ ಆಧಾರದ ಮೇಲೆ ರಾಜ್ಯ ಸರ್ಕಾರವು ಸಕ್ಕರೆ ಕಾರ್ಖಾನೆಗಳ ಅಗತ್ಯತೆಯನ್ನು ಮನಗಂಡು ಹೊಸ ಸಕ್ಕರೆ ಕಾರ್ಖಾನೆಗಳಿಗೆ ಅಗತ್ಯವಿದ್ದಲ್ಲಿ ಅದಕ್ಕೆ ಕಬ್ಬು ಮೀಸಲು ಕ್ಷೇತ್ರ, ವಿದ್ಯುತ್, ನೀರು ಭೂಮಿ ಇತ್ಯಾದಿಗಳ ಅನುಕೂಲತೆಗಳನ್ನು ಒದಗಿಸಿ ಕೊಡುತ್ತದೆ. ಈ ಸಂಬಂಧವಾಗಿ ಕೇಂದ್ರ ಸರ್ಕಾರವು 83 ಐ ಇ ಎಮ್ ನೀಡಿದ್ದು ಇನ್ನು ಹೆಚ್ಚಿನ ಸಂಖ್ಯೆಯ ಸಕ್ಕರೆ ಕಾರ್ಖಾನೆಗಳು ರಾಜ್ಯಕ್ಕೆ ಅಗತ್ಯವಿಲ್ಲವೆಂಬುದನ್ನು ಮನಗಂಡು ಈ ಬಗ್ಗೆ ನಿರ್ಧರಿಸಲು ಅಪರ ಮುಖ್ಯಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಈ ಬಗ್ಗೆ ಹೊಸ ನೀತಿ ರೂಪಿಸಲು ಒಂದು ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಸರ್ಕಾರವು ಈ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ. ಈಗಾಗಲೇ ಒಟ್ಟು 16 ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದ್ದು ಅವುಗಳ ವಿವರ ಈ ಕೆಳಗಿನಂತಿದೆ.

ಸಹಕಾರಿ ವಲಯ :-

1. ಸೋಮೇಶ್ವರ ಸಸಕಾ (ನಿ) ಬೈಲಹೊಂಗಲ, ಬೆಳಗಾಂ ಜಿಲ್ಲೆ
2. ಧನಲಕ್ಷ್ಮಿ ಸಸಕಾ(ನಿ) ಖಾನಪೇಟೆ ರಾಮದುರ್ಗ ತಾ.
3. ಮಾರ್ಕಂಡೇಯ ಸಸಕಾ 9ನಿ) ಕಾಕತಿ, ಬೆಳಗಾಂ ಜಿಲ್ಲೆ
4. ಸಂಗಂ ಸಸಕಾ(ನಿ) ಹಿಡಕಲ್ ಡ್ಯಾಮ್, ಹುಕ್ಕೇರಿ ತಾ: ಬೆಳಗಾಂ ಜಿ.

5. ಮೃಡಗಿರಿ ಸಸಕಾ (ನಿ) ಗಂಗಾಮರ ಮುಂಡರಗಿ ತಾ. ಧಾರವಾಡ
6. ಭೀಮಾಶಂಕರ ಸಸಕಾ (ನಿ) ಇಂಡಿ ಬಿಜಾಪುರ ಜಿಲ್ಲೆ
7. ಮಹಾತ್ಮಾ ಗಾಂಧಿ ಸಸಕಾ (ನಿ) ಬಾಲ್ಕಿ ಬೀದರ್ ಜಿಲ್ಲೆ
8. ಬಸವೇಶ್ವರ ಸಸಕಾ(ನಿ) ಕಿರಿಗೇರಿ, ಹಿರೇಕೆರೂರು ತಾ. ಹಾವೇರಿ ಜಿಲ್ಲೆ

ಖಾಸಗಿ ವಲಯ :-

9. ವಿಶ್ವನಾಥ್ ಶುಗರ್ಸ್ (ಲಿ) ಬೆಲ್ಲದವಾಗೇವಾಡಿ, ಹುಕ್ಕೇರಿ ತಾ. ಬೆಳಗಾಂ ಜಿಲ್ಲೆ
10. ಎಸ್‌ಪಿಆರ್ ಶುಗರ್ಸ್ ಕಂಚುಗಾರನಹಳ್ಳಿ, ರಾಮನಗರ ತಾ. ಬೆಂಗಳೂರು ಗ್ರಾಮಾಂತರ ಜಿಲ್ಲೆ
11. ಎಸ್ ಸಿ ಎಂ ಶುಗರ್ಸ್, ಮದ್ದೂರು ತಾ. ಮಂಡ್ಯ ಜಿಲ್ಲೆ
12. ಶಿರಗುಪ್ಪಿ ಶುಗರ್ಸ್ ವರ್ಕ್ಸ್ (ಲಿ) ಕಾಗವಾಡ ಅಥಣಿ ತಾ. ಬೆಳಗಾಂ ಜಿಲ್ಲೆ
13. ಹರಿಪ್ರಿಯ ಶುಗರ್ಸ್ ವರ್ಕ್ಸ್ (ಲಿ) ಚನ್ನಕೇರಿ ಅಥಣಿ ತಾ. ಬೆಳಗಾಂ ಜಿಲ್ಲೆ
14. ಬಾದಾಮಿ ಶುಗರ್ಸ್ (ಲಿ) ಬಾದಾಮಿ, ರಾಮದುರ್ಗಾರಸ್ತೆ ಬಾಗಲಕೋಟೆ ಜಿಲ್ಲೆ
15. ಬೀಳಗಿ ಶುಗರ್ಸ್ (ಲಿ) ಬಾಡಗಂಡಿ, ಬಾಗಲಕೋಟೆ ಜಿಲ್ಲೆ
16. ಭಾರತ್ ಶುಗರ್ಸ್ (ಲಿ) ಬಂಗೂರು ನಗರ ದಾಂಡೇಲಿ ತಾ. ಉತ್ತರ ಕನ್ನಡ ಜಿಲ್ಲೆ

ಅ) ಈ ಮೇಲ್ಕಂಡ ಒಟ್ಟು 16 ಸಕ್ಕರೆ ಕಾರ್ಖಾನೆಗಳ ಪೈಕಿ 8 ಸಹಕಾರಿ ಕ್ಷೇತ್ರದ ಕಾರ್ಖಾನೆಗಳಾದರೆ ಉಳಿದ 8 ಖಾಸಗಿ ಕ್ಷೇತ್ರದ ಕಾರ್ಖಾನೆಗಳಾಗಿವೆ..

ಇ) ಲೈಸೆನ್ಸ್ ಪಡೆದ ಕಾರ್ಖಾನೆಗಳ ಪೈಕಿ, ಅಂದರೆ 1998 ರಿಂದೀಚೆಗೆ ಒಟ್ಟು 12 ಕಾರ್ಖಾನೆಗಳು ಪ್ರಾರಂಭವಾಗಿವೆ. ಅವುಗಳೆಂದರೆ

1. ರೈತರ ಸಸಕಾ, ರನ್ನನಗರ,
2. ಐಸಿಎಲ್ ಶುಗರ್ಸ್ ಕೆ ಆರ್ ಪೇಟೆ
3. ಪ್ರಭುಲಿಂಗೇಶ್ವರ ಶುಗರ್ಸ್ (ಲಿ) ಸಿದ್ದಾಪುರ
4. ರೇಣುಕಾ ಶುಗರ್ಸ್, ಮನೋಲಿ
5. ಶಾಮನೂರು ಶುಗರ್ಸ್, ದುಗ್ಗಾವತಿ
6. ಜಮಖಂಡಿ ಶುಗರ್ಸ್ ಜಮಖಂಡಿ
7. ವೆಂಕಟೇಶ್ವರ ಪವರ್ ಪ್ರಾಜೆಕ್ಟ್, ಬೇಡಕಿಹಾಳ್
8. ಅಥಣಿ ಫಾರ್ಮರ್ಸ್, ಅಥಣಿ, ಬೆಳಗಾಂ ಜಿಲ್ಲೆ
9. ಕೃಷ್ಣಾ ಸಸಕಾ ಅಥಣಿ
10. ನಾರಂಜಾ ಸಸಕಾ, ಬೀದರ್
11. ನಿರಾಣಿ ಶುಗರ್ಸ್, ಮುಧೋಳ್
12. ಜೆಮ್ ಶುಗರ್ಸ್, ಕುಂದರಗಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ

ಈ) ಈ ಪೈಕಿ ಸಹಕಾರಿ ರಂಗದ 3 ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾಗಿದ್ದು ಅವು ಕಾರ್ಯಾಚರಣೆಯಲ್ಲಿವೆ. ಅವುಗಳೆಂದರೆ

1. ರೈತರ ಸಸಕಾ, ರನ್ನನಗರ, ಮುಧೋಳ್ ತಾ:
2. ಕೃಷ್ಣ ಸಸಕಾ ಅಥಣಿ, ಬೆಳಗಾಂ ಜಿಲ್ಲೆ

3. ನಾರಂಜಾ ಸಸಕಾ ಬೀದರ್

ಊ) ಸಹಕಾರಿ ರಂಗದ 8 ಹೊಸ ಸಕ್ಕರೆ ಕಾರ್ಖಾನೆಗಳ ಪೈಕಿ 3 ಕಾರ್ಖಾನೆಗಳಾದ

1. ಮಹಾತ್ಮ ಗಾಂಧಿ ಸಸಕಾ (ನಿ)
2. ಸೋಮೇಶ್ವರ ಸಸಕಾ (ನಿ) ಮತ್ತು
3. ಧನಲಕ್ಷ್ಮಿ ಸಸಕಾ (ನಿ) ಈ ಕಾರ್ಖಾನೆಗಳ ಸ್ಥಾಪನಾ ಕಾರ್ಯ ಅಂತಿಮ ಹಂತದಲ್ಲಿದ್ದು, ಅವು ಈ ವರ್ಷ ಕಾರ್ಯಾಚರಣೆ ಪ್ರಾರಂಬಿಸಲಿವೆ. ಉಳಿದ ಸಕ್ಕರೆ ಕಾರ್ಖಾನೆಗಳಲ್ಲಿನ ಪ್ರಗತಿ ವಿವರ ಈ ಕೆಳಕಂಡಂತಿದೆ.

1. ಮಾರ್ಕಂಡೇಯ ಸಸಕಾ (ನಿ)	ಶೇ. 40 ರಷ್ಟು
2. ಮೃಡಗಿರಿ ಸಸಕಾ (ನಿ)	ಶೇ. 30 ರಷ್ಟು
3. ಸಂಗಮ ಸಸಕಾ (ನಿ)	ಶೇ. 20 ರಷ್ಟು
4. ಭೀಮಾಶಂಕರ್ ಸಸಕಾ (ನಿ)	ಶೇ 15 ರಷ್ಟು
5. ಬಸವೇಶ್ವರ ಸಕ್ಕರೆ ಕಾರ್ಖಾನೆ	ಪ್ರಗತಿ ಇಲ್ಲ

ರಾಜ್ಯದಲ್ಲಿ ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹ

4616 (5181) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರೇಷ್ಮೆ ಬೆಳೆ ಬೆಳೆಯಲು ಹೆಚ್ಚಿನ ಪ್ರೋತ್ಸಾಹ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆಯೇ?

ಆ) ಬೆಳಗಾವಿ ಜಿಲ್ಲೆಯಲ್ಲಿ ರೇಷ್ಮೆ ಬೆಳೆಯಲು ಹೆಚ್ಚಿನ ಅನುಕೂಲತೆಗಳಿದ್ದರೂ ಅತೀ ಕಡಿಮೆ ಬೆಲೆಗೆ ರೇಷ್ಮೆ ಮಾರುತ್ತಿರುವುದರಿಂದ ರೈತರು ರೇಷ್ಮೆ ಬೆಳೆಯುವುದನ್ನು ಕಡಿಮೆ ಮಾಡುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಇಲ್ಲಿ ರೇಷ್ಮೆ ಬೆಳೆಯಲು ಹೆಚ್ಚಿನ ಸೌಕರ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಈ) ಬೆಳಗಾವಿ ಜಿಲ್ಲೆಯಲ್ಲಿ ಕಳೆದ ವರ್ಷ ಎಷ್ಟು ಎಕರೆ ಜಮೀನಿನಲ್ಲಿ ರೇಷ್ಮೆಯನ್ನು ಬೆಳಯಲಾಗಿತ್ತು?

ಉ) ಈ ವರ್ಷ ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಎಕರೆ ಜಮೀನಿನಲ್ಲಿ ರೇಷ್ಮೆಯನ್ನು ಬೆಳೆಯಲಾಗುತ್ತಿದೆ.

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ) ಹೌದು

ಆ) ಬಂದಿದೆ

ಇ) ಆ ಕುರಿತಂತೆ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ :-

1. ಹಿಪ್ಪುನೇರಳೆ ಕೃಷಿ, ಹುಳು ಸಾಕಣೆ ಸಲಕರಣೆಗಳ ಖರೀದಿ ಹಾಗೂ ಹುಳು ಸಾಕಣೆ ಮನೆ ನಿರ್ಮಾಣಕ್ಕೆ ವಾಣಿಜ್ಯ ಬ್ಯಾಂಕುಗಳ ಮೂಲಕ ಸಾಲಸೌಲಭ್ಯ ಒದಗಿಸಲಾಗುತ್ತಿದೆ.

2. ಸುಧಾರಿತ ಹಿಪ್ಪುನೇರಳೆ ತಳಿಗಳ ಸಸಿಗಳನ್ನು ಬೆಳೆಸಿ ವಿಸ್ತರಿಸಲಾಗುತ್ತಿದೆ.